ಕನ್ನಡ ಸಿನಿಮಾ

# ಹೊಸ ಸಾಧ್ಯತೆಯೊಂದರ ಹುಟ್ಟು!

ಹೊಸ ತಂತ್ರಜ್ಞಾನ ಅಂಬೆಗಾಲಿಡುತ್ತ ಬಂದಾಗ ಅದಕ್ಕೆ ವಿರೋಧದ ದನಿಗಳು ಎದುರಾಗುವುದನ್ನು ಕಾಲ ಮತ್ತೆ ಮತ್ತೆ ದಾಖಲಿಸಿದೆ. ಇದೇ ರೀತಿಯ ವಿರೋಧವು ಸಿನಿಮಾ ಪ್ರದರ್ಶನಕ್ಕೆ ಆನ್‌ಲೈನ್ ಮೂಲಕ ಸಿಕ್ಕಿರುವ ಹೊಸ ವೇದಿಕೆಗಳ ವಿಚಾರದಲ್ಲೂ ವ್ಯಕ್ತವಾಗಿದೆ. ಆದರೆ, ಅಮೆಜಾನ್ ಪ್ರೈಮ್‌ನಂತಹ ವೇದಿಕೆಗಳು ಕನ್ನಡ ಸಿನಿಮಾ ಮಾರುಕಟ್ಟೆಯ ನೆಲೆ ವಿಸ್ತರಿಸಲು ಸಹಾಯ ಮಾಡಬಲ್ಲವು ಎನ್ನುವುದು ಕನ್ನಡ ಚಿತ್ರರಂಗದ ಯುವ ನಿರ್ಮಾತೃಗಳ ನಿರೀಕ್ಷೆ.

**■ ವಿಜಯ್ ಜೋಷಿ**

'ನಾವಿರುವುದು ಬೆಂಗಳೂರಿನಲ್ಲಿ ಅಲ್ಲ. ರಾಜಧಾನಿಯಿಂದ ದೂರದಲ್ಲಿರುವ ಕರಾವಳಿಯ ಅರೆಪಟ್ಟಣದಲ್ಲಿ. ಇಲ್ಲಿ ಪಿವಿಆರ್ ಇಲ್ಲ, ಐನಾಕ್ಸ್ ಇಲ್ಲ. ಹೊಸ ಸಿನಿಮಾ ವೀಕ್ಷಿಸಲು ಬೆಂಗಳೂರಿನಲ್ಲಿ ಸಿಗುವ ಹವಾನಿಯಂತ್ರಿತ ಮಲ್ಟಿಪ್ಲೆಕ್ಸ್ ಬೇಕಿದ್ದರೆ ದೂರದ ಮಣಿಪಾಲಕ್ಕೆ ಹೋಗಬೇಕು...'

'ನಮಗೆ ಬೇಕಿರುವ ಸಿನಿಮಾ ವೀಕ್ಷಿಸಲು ಪದೇ ಪದೇ ಅಲ್ಲಿಗೆ ಹೋಗಲು ಆಗುವುದಿಲ್ಲ. ಅಮೆಜಾನ್ ಪ್ರೈಂ, ಜೀ5, ಆಲ್ಟ್ ಬಾಲಾಜಿಯಂತಹ ಆನ್‌ಲೈನ್ ವೇದಿಕೆಗಳ ಮೂಲಕ ಸಿನಿಮಾ ನೋಡುತ್ತೇನೆ. ಇವುಗಳಲ್ಲಿ ಸಿನಿಮಾ ಬರುವುದು ಮಲ್ಟಿಪ್ಲೆಕ್ಸ್‌ಗಳಿಗಿಂತ ತುಸು ತಡವಾಗಬಹುದು. ಆದರೆ, ಆರಾಮವಾಗಿ, ಬೇಕೆಂದಾಗ ನೋಡಿಕೊಳ್ಳಬಹುದಲ್ಲ...'

ಕನ್ನಡದ ಕರಾವಳಿಯ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದ ಮಂಜುನಾಥ್ ಎನ್ನುವ ಯುವಕ ಆಡುತ್ತಿರುವ ಮೇಲಿನ ಮಾತುಗಳಲ್ಲಿ ಸಿನಿಮಾ ವೀಕ್ಷಣೆಗೆ ಇರುವ ಆಯ್ಕೆಗಳು ವಿಸ್ತಾರ ಆಗುತ್ತಿರುವುದು ಕಾಣಿಸುತ್ತಿದೆ. ಅದಕ್ಕಿಂತಲೂ ಮುಖ್ಯವಾಗಿ, ಸಿನಿಮಾ ಮಾರುಕಟ್ಟೆ ವಿಸ್ತರಣೆ ಆಗಬಹುದಾದ ಸೂಚನೆಯೂ ಇದೆ.

ಆನ್‌ಲೈನ್ ಮೂಲಕ ಮನರಂಜನೆ ಒದಗಿಸುವ ದೈತ್ಯ ಸಂಸ್ಥೆ 'ಅಮೆಜಾನ್', ತನ್ನ 'ಪ್ರೈಮ್ ವಿಡಿಯೊ' ವಿಭಾಗದಲ್ಲಿ ಕನ್ನಡ ಸಿನಿಮಾಗಳನ್ನು ನೀಡುವುದನ್ನು ನವೆಂಬರ್ 1ರಿಂದ (ರಾಜ್ಯೋತ್ಸವದ ದಿನ) ಆರಂಭಿಸಿದೆ. ಈಗ ಅಲ್ಲಿ ಸುಮಾರು ಮೂವತ್ತು ಕನ್ನಡ ಸಿನಿಮಾಗಳು ಲಭ್ಯವಿವೆ. 'ಮುಂದಿನ ಒಂದೆರಡು ತಿಂಗಳುಗಳಲ್ಲಿ ಕನ್ನಡದ ಅತ್ಯುತ್ತಮ ಸಿನಿಮಾಗಳು ನಮ್ಮ ವೇದಿಕೆಯಲ್ಲಿ ಸಿಗುವಂತೆ ಮಾಡಲಿದ್ದೇವೆ. ಇದು ಆರಂಭ ಮಾತ್ರ' ಎಂದು ಅಮೆಜಾನ್ ಪ್ರೈಮ್ ವಿಡಿಯೊ ಹೇಳಿದೆ.

'ಪ್ರೈಮ್ ವಿಡಿಯೊ' ಸಂಸ್ಥೆ ಕನ್ನಡ ಸಿನಿಮಾಗಳ ಡಿಜಿಟಲ್ ಹಕ್ಕುಗಳನ್ನು ಖರೀದಿಸುತ್ತಿರುವುದನ್ನು ಕನ್ನಡ ಚಿತ್ರ ನಿರ್ಮಾಪಕರು 'ಕನ್ನಡ ಸಿನಿಮಾ ಮಾರುಕಟ್ಟೆಯ ವಿಸ್ತರಣೆ' ಎಂದೇ ಗ್ರಹಿಸುತ್ತಿದ್ದಾರೆ. 'ನಾನು ನಿರ್ಮಾಣ ಮಾಡಿದ್ದ ಸಿನಿಮಾ ಒಂದರ ಡಿಜಿಟಲ್ ಹಕ್ಕುಗಳನ್ನು ಅಮೆಜಾನ್ ಪ್ರೈಮ್‌ಗೆ ಮಾರಾಟ ಮಾಡಿದೆ. ಅದರಿಂದ ನಮಗೆ ಒಟ್ಟು ನಿರ್ಮಾಣ ವೆಚ್ಚದ ಶೇಕಡ 54ರಷ್ಟು ಹಣ ಸಿಕ್ಕಿತು' ಎಂದು ಕನ್ನಡ ಸಿನಿಮಾ ನಿರ್ಮಾಪಕರೊಬ್ಬರು ಹೇಳುತ್ತಾರೆ. 'ಅಮೆಜಾನ್ ಪ್ರೈಮ್'ನಂತಹ ದೈತ್ಯ ಇಲ್ಲದಿದ್ದ ಸಂದರ್ಭದಲ್ಲಿ ನಿರ್ಮಾಪಕರಿಗೆ ಇದ್ದ ಆದಾಯ ಮೂಲಗಳೆಂದರೆ; ಚಿತ್ರಮಂದಿರಗಳಿಂದ ಬರುವ ಹಣ, ಟಿ.ವಿ. ವಾಹಿನಿಗಳಿಗೆ ಸ್ಯಾಟಲೈಟ್ ಹಕ್ಕುಗಳ ಮಾರಾಟದಿಂದ ಬರುವ ಹಣ, ಆಡಿಯೊ, ರಿಮೇಕ್ ಅಥವಾ ಡಬ್ಬಿಂಗ್ ಹಕ್ಕುಗಳ ಮಾರಾಟದಿಂದ ಬರುವ ಹಣ. ಈಗ ಡಿಜಿಟಲ್ ಹಕ್ಕುಗಳ ಮಾರಾಟ ಹೊಸ ಆದಾಯ ಮೂಲ ಆಗಿದೆ ಎನ್ನುತ್ತಾರೆ ಈ ನಿರ್ಮಾಪಕ.

ಕೆಲವು ತಿಂಗಳುಗಳ ಹಿಂದೆ ಬಿಡುಗಡೆಯಾದ ಕನ್ನಡದ ಒಂದು ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಅಷ್ಟೇನೂ ಹಣ ಗಳಿಸಲಿಲ್ಲ. 'ಆ ಸಿನಿಮಾ, ಚಿತ್ರಮಂದಿರಗಳಿಂದ ಅಷ್ಟೇನೂ ಹಣ ತಂದುಕೊಡುವುದಿಲ್ಲ ಎಂಬುದು ನಮಗೆ ಮೊದಲೇ ಗೊತ್ತಿತ್ತು. ಆದರೂ, ಕನ್ನಡದಲ್ಲಿ ಇಂಥದ್ದೊಂದು ಸಿನಿಮಾ ಮಾಡುವ ಪ್ರವೃತ್ತಿ ಶುರುವಾಗಬೇಕು ಎಂಬ ಉದ್ದೇಶದಿಂದ ನಾವು ಅದನ್ನು ನಿರ್ಮಾಣ ಮಾಡಿದೆವು. ಈಗ ಡಿಜಿಟಲ್ ಹಕ್ಕು ಮಾರಾಟದಿಂದ ಒಂದಿಷ್ಟು ಹಣ ಬಂದಿದೆ. ಇದರಿಂದಾಗಿ ಚಿತ್ರಕ್ಕೆ ಬಂಡವಾಳ ಹಾಕಿದವರು ನಷ್ಟವಿಲ್ಲದ ಸ್ಥಿತಿ ತಲುಪಿದ್ದಾರೆ' ಎನ್ನುತ್ತಿದ್ದಾರೆ ಈ ಚಿತ್ರ ತಂಡದ ಸದಸ್ಯರು.

ಆನ್‌ಲೈನ್ ಮೂಲಕ ಸಿನಿಮಾ ವೀಕ್ಷಿಸುವವರು ಹಾಗೂ ಮಲ್ಟಿಪ್ಲೆಕ್ಸ್‌ಗಳಿಗೆ ಹೋಗಿ ಸಿನಿಮಾ ನೋಡುವವರು ಒಂದೇ ವರ್ಗದ ಜನ ಎಂದು ಸಿನಿಮಾ ಉದ್ಯಮದ ಕೆಲವರು ಭಾವಿಸಿದ್ದಾರೆ. ಮಲ್ಟಿಪ್ಲೆಕ್ಸ್‌ಗೆ ಹೋಗಿ ಹೆಚ್ಚಿನ ಹಣ ಕೊಟ್ಟು ಸಿನಿಮಾ ನೋಡುವ ಶಕ್ತಿ ಇರುವವರು ರಾಜ್ಯದ ಎಲ್ಲೆಡೆ ಇದ್ದರೂ, ಮಲ್ಟಿಪ್ಲೆಕ್ಸ್ ಸೌಲಭ್ಯ ಎಲ್ಲ ಕಡೆ ಇಲ್ಲ. ಅಂದರೆ, ಈ ಜನರನ್ನು ತಲುಪಲು ಕನ್ನಡ ಸಿನಿಮಾ ಉದ್ಯಮಕ್ಕೆ ಸಾಧ್ಯವಾಗುತ್ತಿಲ್ಲ. ಡಿಜಿಟಲ್ ವೇದಿಕೆಗಳ ಮೂಲಕ ಈ ವರ್ಗದ ಜನರಿಗೆ ಹೊಸ ಸಿನಿಮಾಗಳನ್ನು ತಲುಪಿಸಿ,